ಈ) ಪೆಚ್ಚುವರಿ ಜಮೀನು ಘೋಷಿಸಿದ ಪ್ರಕರಣಗಳು 717, ಹೆಚ್ಚುವರಿ ಎಂದು ಘೋಷಿಸಿದ ಕ್ಷೇತ್ರ 21244.1 ಎಕರೆ.

ಉ) ಹೆಚ್ಚುವರಿ ಎಂದು ನಿರ್ಧರಿಸಿದ ಕ್ಷೇತ್ರದ ಪೈಕಿ ಈ ಕೆಳಗಿನಂತೆ ವಿತರಿಸಲಾಗಿದೆ.

		ಸಂಖ್ಯೆ	ಕ್ಷೇತ್ರ (ಎಕರೆಗಳು)
1)	ಪರಿಶಿಷ್ಟ ಜಾತಿ	1327	5164-09
2)	ಪರಿಶಿಷ್ಟ ಜನಾಂಗ	29	76-15
3)	ಇತರರು	1073	4412-10
4)	ಕಲಂ 77(3) ರಂತೆ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ್ದು	18	1747-22
5)	ಉಚ್ಚ ನ್ಯಾಯಾಲಯದ ತಡೆಯಾಜ್ಞೆಯಲ್ಲಿ ಒಳಗಾಗಿರುವ ಕ್ಷೇತ್ರ	-	9903.37
	ಒಟ್ಟು	2447	21244-13

ಊ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ

1006 (1678) ಶ್ರೀ ಮನೋಹರ್ ಐನಾಪುರ (ಬಳ್ಳೊಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೇಯೆ?

ಆ) ಹಾಗಾದರೆ, ಈವರೆವಿಗೆ ಪರಿವರ್ತಿಸಿರುವ ತಾಂಡಗಳ ಸಂಖ್ಯೆ ಎಷ್ಟು?

ಇ) ಈ ಉದ್ದೇಶಕ್ಕಾಗಿ ನಿಗಧಿಪಡಿಸಿರುವ ಹೆಚ್ಚುವರಿ ಮೊತ್ತ ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು.

ಆ) ಇಲ್ಲ. ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪರಿವರ್ತನೆಗೆ ಹಣ ನಿಗಧಿಪಡಿಸುವ ಅಗತ್ಯವಿಲ್ಲ.